## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1322 |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16.03.2026 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

****

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿನ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜೀವ ರಕ್ಷಕ ಔಷಧಗಳು, ಐವಿ ದ್ರಾವಣಗಳು, ಸಾಮಾನ್ಯ ನೋವು ನಿವಾರಕ ಜ್ವರದ ಔಷಧಿಗಳು ಹಾಗೂ ಆಂಟಿಬಯೋಟಿಕ್ ಸೇರಿದಂತೆ ನಿತ್ಯ ಬಳಕೆಯ ಔಷಧಗಳ ತೀವ್ರ ಕೊರತೆ ಉಂಟಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br><br>ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳು ಮತ್ತು ಹೊಲಿಗೆ (ಸರ್ಜಿಕಲ್) ಸಾಮಗ್ರಿಗಳು ಹಾಗೂ ತುರ್ತು ಮತ್ತು ಯೋಜಿತ ಶಸ್ತ್ರಚಿಕಿತ್ಸೆಗಳಿಗೆ ಅಗತ್ಯವಿರುವ ಸಾಮಗ್ರಿಗಳ ದಾಸ್ತಾನು ಕುರಿತು, 2023-24ನೇ ಸಾಲಿನಲ್ಲಿ ಈಗಾಗಲೇ ಖರೀದಿ ಆದೇಶ ನೀಡಲಾಗಿದ್ದು, ಅವುಗಳನ್ನು ಉಗ್ರಾಣಗಳಿಗೆ ಸರಬರಾಜು ಮಾಡಲಾಗಿದೆ. ಈ ಸರಬರಾಜುಗಳಲ್ಲಿ ಕೆಲವು ಸಾಮಗ್ರಿಗಳು ಸಂಬಂಧಿತ ಉಗ್ರಾಣಗಳು ಹಾಗೂ ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವುದು ಕಂಡುಬಂದಿದೆ. ಜಿಲ್ಲಾ ಔಷಧ ಉಗ್ರಾಣ ಮತ್ತು ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವ ದಾಸ್ತಾನಿನ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ.<br><br>ಔಷಧ ಉಗ್ರಾಣಗಳಲ್ಲಿ ಲಭ್ಯತೆ ಇಲ್ಲದ ಔಷಧಗಳಿಗೆ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಸರ್ಕಾರದ ಆದೇಶದನ್ವಯ ಸ್ಥಳೀಯ ಔಷಧ ಖರೀದಿಗೆ KSMSCL ಬ್ಯಾಂಕ್ ಖಾತೆಯಿಂದ ರೂ.30.00 ಕೋಟಿಗಳ ಮೊತ್ತವನ್ನು SAST ಗೆ ಬಿಡುಗಡೆ ಮಾಡಲಾಗಿದ್ದು, ಅದನ್ನು ಆರೋಗ್ಯ ಸಂಸ್ಥೆಗಳಿಗೆ ಮರು ಬಿಡುಗಡೆ ಮಾಡುವ ಮೂಲಕ ತುರ್ತು ಅವಶ್ಯಕತೆಗಳಿಗೆ ಅಗತ್ಯ ಔಷಧಿಗಳನ್ನು ಸ್ಥಳೀಯವಾಗಿ ಖರೀದಿಸಿ ಔಷಧಗಳ ಲಭ್ಯತೆಯನ್ನು ಮಾಡಲು ಆರೋಗ್ಯ ಸಂಸ್ಥೆಗಳು ಕ್ರಮವಹಿಸುತ್ತಿವೆ.<br><br>ಇದಲ್ಲದೆ, ಆರೋಗ್ಯ ಸಂಸ್ಥೆಗಳು ಅಗತ್ಯವಿರುವ ಔಷಧಿಗಳನ್ನು Government e-Marketplace (GeM) ಪೋರ್ಟಲ್ ಮೂಲಕವೂ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ತುರ್ತು ಅವಶ್ಯಕತೆಗಳಿಗೆ ಔಷಧಿಗಳನ್ನು ತ್ವರಿತವಾಗಿ ಪಡೆಯಲು ಸಹಾಯವಾಗುತ್ತದೆ.<br><br>ವೈದ್ಯಕೀಯ ಕಾರಣಗಳಿಗಾಗಿ ಮತ್ತು ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ನಿರ್ವಹಿಸಬಹುದಾದ ಶಸ್ತ್ರಚಿಕಿತ್ಸೆಗಳ ಸಂಖ್ಯೆಗಳಿಗನುಗುಣವಾಗಿ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತದೆ ಹೊರತು ರಾಜ್ಯದ ಯಾವುದೇ ಸರಕಾರಿ ಆಸ್ಪತ್ರೆ / ಆರೋಗ್ಯ ಸಂಸ್ಥೆಗಳಲ್ಲಿ ಔಷಧ ಹಾಗೂ ಹೊಲಿಗೆ |
| (ಆ) | ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಹಾಗೂ ಹೊಲಿಗೆ (ಸರ್ಜಿಕಲ್), ಸಾಮಗ್ರಿಗಳ ಕೊರತೆಯಿಂದ ತುರ್ತು ಹಾಗೂ ಯೋಜಿತ ಶಸ್ತ್ರಚಿಕಿತ್ಸೆಗಳನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂಬ ವರದಿಗಳಿದ್ದು, ಇದರಿಂದ ರೋಗಿಗಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗಿರುವುದನ್ನು ಸರ್ಕಾರ ಪರಿಗಣಿಸದೇ ಇರಲು ಕಾರಣವೇನು? | |

<table>
<tr><td></td><td></td><td>(ಸರ್ಜಿಕಲ್) ಸಾಮಗ್ರಿಗಳ ಕೊರತೆಯಿಂದ ತುರ್ತು ಹಾಗೂ ಯೋಜಿತ ಶಸ್ತ್ರಚಿಕಿತ್ಸೆಗಳನ್ನು ಮುಂದೂಡಿರುವುದಿಲ್ಲ.</td></tr>
<tr><td>(ಇ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಔಷಧ ಖರೀದಿ ಮಾಡಲು ಮೀಸಲಾದ ಅನುದಾನ ಎಷ್ಟು: ಖರ್ಚು ಮಾಡಿದ ಮೊತ್ತ ಎಷ್ಟು: ವರ್ಷವಾರು ವಿವರ ನೀಡುವುದು):</td><td>ಕಳೆದ ಮೂರು ವರ್ಷಗಳಲ್ಲಿ KSMSCL ಸಂಸ್ಥೆಯಿಂದ ಔಷಧ ಖರೀದಿ ಮಾಡಲು ಮೀಸಲಿಡಲಾದ ಅನುದಾನ ಮತ್ತು ಖರ್ಚು ಮಾಡಿದ ಮೊತ್ತದ ವಿವರ:
<table>
<tr><th>ಕ್ರ ಸಂ</th><th>ವರ್ಷ</th><th>ಮೀಸಲಿಟ್ಟ ಅನುದಾನ ಮೊತ್ತ</th><th>ಖರ್ಚು ಮೊತ್ತ</th></tr>
<tr><td>1</td><td>2022-23</td><td rowspan="2">ರೂ. 629.90 ಕೋಟಿ, ಸರ್ಕಾರದ ಆದೇಶ ಸಂ: ಆಕುಕ 141 ಎಫ್‌ಪಿ ಆರ್2022 ದಿ:19.12.2022 ಮತ್ತು</td><td>348.81 ಕೋಟಿ</td></tr>
<tr><td>2</td><td>2023-24</td><td>269.35 ಕೋಟಿ</td></tr>
<tr><td>3</td><td>2024-25</td><td>ರೂ.300 ಕೋಟಿ , ಸರ್ಕಾರದ ಆದೇಶ ಸಂ: ಆಕುಕ 129 ಎಫ್‌ಪಿ ಆರ್2025 ದಿ:01.08.2025 ರಲ್ಲಿ ಮೀಸಲಿಡಲಾಗಿದೆ.</td><td>373.72 ಕೋಟಿ</td></tr>
</table></td></tr>
<tr><td>(ಈ)</td><td>ಔಷಧಗಳ ಪೂರೈಕೆಯಲ್ಲಿ ಉಂಟಾದ ವಿಳಂಬಕ್ಕೆ ಕಾರಣವಾದ ಆಡಳಿತಾತ್ಮಕ ಅಥವಾ ತಾಂತ್ರಿಕಾ ಸಮಸ್ಯೆಗಳು ಯಾವುವು: ಔಷಧ ಖರೀದಿ ಪ್ರಕ್ರಿಯೆಯಲ್ಲಿ ಯಾವುದೇ ಲೋಪ, ನಿರ್ಲಕ್ಷ್ಯ ಅಥವಾ ಭ್ರಷ್ಟಾಚಾರ ನಡೆದಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ: ಇದ್ದಲ್ಲಿ, ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ:</td><td>ರಾಜ್ಯದ ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಔಷಧಿಗಳ ಪಟ್ಟಿಯನ್ನು National List of Essential Medicines (NLEM) ಹಾಗೂ Indian Public Health Standards (IPHS) ಮಾರ್ಗಸೂಚಿಗಳ ಆಧಾರದ ಮೇಲೆ ಸಮಗ್ರವಾಗಿ ಪರಿಶೀಲಿಸಲಾಗಿದೆ. ಜೊತೆಗೆ ಇತರೆ ರಾಜ್ಯಗಳ ಔಷಧ ಖರೀದಿ ಪಟ್ಟಿಗಳೊಂದಿಗೆ ಹೋಲಿಕೆ ನಡೆಸಿ, ಬಳಕೆಯಿಂದ ಹೊರಗುಳಿದ ಅಥವಾ ಅನಾವಶ್ಯಕ ಔಷಧಿಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಪ್ರಸ್ತುತ ಚಿಕಿತ್ಸಾ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಔಷಧಿಗಳನ್ನು ಸೇರಿಸಲಾಗಿದೆ. ವಿಶೇಷವಾಗಿ ವಿವಿಧ ವಿಧದ ರಾಜ್ಯ ಸರ್ಕಾರದ ಔಷಧ ಉಗ್ರಾಣ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ಔಷಧಗಳನ್ನು ಪೂರೈಸಲು 2025-26ನೇ ಸಾಲಿನ ಔಷಧ ಖರೀದಿ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರದ ಆದೇಶ ಸಂಖ್ಯೆ ಆಕುಕ 129 ಎಫ್.ಪಿ.ಆರ್ 2025, ದಿನಾಂಕ 04-08-2025 ರನ್ವಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ ಹಾಗೂ ಇತರೆ ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ 890 ವಿಧಗಳ ಔಷಧಿಗಳನ್ನು KSMSCL ಮೂಲಕ ಖರೀದಿಸಲು ರೂ. 880.68 ಕೋಟಿಯನ್ನು ಮಂಜೂರು ಮಾಡಲಾಗಿದೆ.</td></tr>
</table>

| | | |
|---|---|---|
| | | ಸರ್ಕಾರದ ಆದೇಶದನ್ವಯ KSMSCL ಸಂಸ್ಥೆಯಿಂದ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, Priority-1 ಮತ್ತು Priority-2 ಪ್ಯಾಕೇಜುಗಳ ಅಡಿಯಲ್ಲಿ 496 ಔಷಧಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.<br><br>ಸಂಸ್ಥೆಯು KTPP ಕಾಯ್ದೆ, 1999 ಹಾಗೂ KTPP ನಿಯಮಗಳು, 2000 ಗಳ ನಿಯಮಗಳನ್ನು ಖರೀದಿ ಪ್ರಕ್ರಿಯೆಯಲ್ಲಿ (Procurement procedure) ಪಾಲಿಸಿ ಯಾವುದೇ ಖರೀದಿ ನಿಯಮಗಳನ್ನು ಉಲ್ಲಂಘಿಸದೇ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗಿರುತ್ತದೆ.<br><br><u>ಅನುಸರಿಸುತ್ತಿರುವ ತಾಂತ್ರಿಕ ಸುಧಾರಣೆಗಳು:</u><br><br>• KTPP ನಿಯಮಾವಳಿಯ ಅನ್ವಯ ಹಾಗೂ ಕಾಲ ಕಾಲಕ್ಕೆ ಆರ್ಥಿಕ ಇಲಾಖೆಯು ಹೊರಡಿಸಿರುವ ಅನುಮೋದಿತ ಆದೇಶಗಳ ಅನ್ವಯ ಸರ್ಕಾರದ Karnataka Public Procurement Portal ಟೆಂಡರ್ ಗಳನ್ನು ಆಹ್ವಾನಿಸಲಾಗುತ್ತದೆ.<br>• ಹೆಚ್ಚಿನ ಬಿಡ್ ದಾರರು ಭಾಗವಹಿಸಲು ತಯಾರಿಕಾ ಸಂಸ್ಥೆಗಳ ಜೊತೆಯಲ್ಲಿ loan license ಹೊಂದಿರುವ ಸಂಸ್ಥೆಗಳಿಗೂ ಟೆಂಡರ್ ಗಳಲ್ಲಿ ಭಾಗವಹಿಸಲು ಅನುವು ಮಾಡಲಾಗಿರುತ್ತದೆ.<br>• ಹೆಚ್ಚಿನ ಬಿಡ್ ದಾರರು ಟೆಂಡರ್ ಗಳಲ್ಲಿ MSME ಭಾಗವಹಿಸಲು MSE ಮತ್ತು Non-MSE ಸಂಸ್ಥೆಗಳಿಗೆ ಅನ್ವಯಿಸುವಂತೆ Past Performance criteria ವನ್ನು ಸಡಿಲಿಸಲಾಗಿರುತ್ತದೆ.<br>• NSIC Certificate ಹೊಂದಿರುವಂತಹ ಸಂಸ್ಥೆಗಳಿಗೆ KTPP ನಿಯಮಾನುಸಾರ EMD ಮೊತ್ತವನ್ನು ಸಲ್ಲಿಸುವುದು ಸಡಿಲಿಸಲಾಗಿರುತ್ತದೆ.<br>• ಹೆಚ್ಚಿನ ಬಿಡ್ ದಾರರು ಟೆಂಡರ್ ಗಳಲ್ಲಿ ಭಾಗವಹಿಸಲು EMD, SD ಮೊತ್ತವನ್ನು E- BG ಮುಖಾಂತರ ಸಲ್ಲಿಸಲು ಸಹ ಸಡಿಲಿಕೆ ನೀಡಲಾಗಿರುತ್ತದೆ.<br><br><u>ಖರೀದಿ ಪ್ರಕ್ರಿಯೆಯ ಸಂಕ್ಷಿಪ್ತ ವಿವರಣೆ:</u><br><br>• Package wise ಔಷಧಗಳಿಗೆ ಟೆಂಡರ್ ದಸ್ತಾವೇಜುಗಳನ್ನು ತಯಾರಿಸಿ KTPP Portal ನಲ್ಲಿ ಪ್ರಕಟಣೆಗೊಳಿಸುವುದು. |

| | | |
|---|---|---|
| | | • ಆಹ್ವಾನಿಸಿದ ದಿನಾಂಕದಿಂದ ತಾಂತ್ರಿಕ ಬಿಡ್ ತೆರೆಯಲು ಕನಿಷ್ಠ 30 ದಿನಗಳ ಕಾಲಾವಕಾಶ ಇರುತ್ತದೆ.<br>• ಸದರಿ ಟೆಂಡರ್ ಗಳಲ್ಲಿ ಭಾಗವಹಿಸಿದ ಬಿಡ್ ದಾರರು ಸಲ್ಲಿಸಿದ ಟೆಂಡರ್ ದಸ್ತಾವೇಜುಗಳನ್ನು ಕ್ರಮವಾಗಿ ನಿಯಮಾನುಸಾರ ಮೌಲ್ಯಮಾಪಾನಗೊಳಿಸಲು ಅಂದಾಜು 10-15 ದಿನಗಳ ಸಮಯದ ಅವಶ್ಯಕತೆ ಇರುತ್ತದೆ.<br>• ಮೌಲ್ಯಮಾಪಾನ ಪೂರ್ಣಗೊಳಿಸಿ ಟೆಂಡರ್ ಮೌಲ್ಯಮಾಪನ ಸಭೆಯಲ್ಲಿ ನಿರ್ಧರಿಸಿದಂತೆ ಆರ್ಥಿಕ ಬಿಡ್ ತೆರೆದು ನಂತರ ಸಲ್ಲಿಸಿರುವ ದರ ಹಾಗೂ ಅಂದಾಜು ದರ ಮತ್ತು ಇತರೆ ಲಭ್ಯವಿರುವ ದರಗಳನ್ನು ಹೋಲಿಸಿ TAC Agenda ವನ್ನು ತಯಾರಿಸಿ ಟೆಂಡರ್ ಅಂಗೀಕಾರ ಸಮಿತಿ ಸಭೆ ನಡೆಸಲು ಕ್ರಮವಹಿಸಲಾಗುತ್ತದೆ.<br>• ಟೆಂಡರ್ ಅಂಗೀಕಾರ ಸಮಿತಿ ಸಭೆ ನಡೆಸಿ ಅಗತ್ಯವಿದ್ದಲ್ಲಿ KPPP portal ಮೂಲಕ ದರ ಸಂಧಾನ ನಡೆಸಿ ತದನಂತರ ಟೆಂಡರ್ ಅಂಗೀಕಾರ ಸಭೆಯಲಿ ಮಂಡಿಸಿ ಚರ್ಚಿಸಿ ದರಗಳನ್ನು ಅಂತಿಮಗೊಳಿಸಲಾಗುತ್ತದೆ. ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಮಯದ ಅವಶ್ಯಕತೆ ಇರುತ್ತದೆ.<br>• ಟೆಂಡರ್ ಅಂಗೀಕಾರ ಸಮಿತಿ ಸಭೆ ನಿರ್ಣಯದಂತೆ L1 ಬಿಡ್ ದಾರರಿಗೆ Notification of Award ನೀಡಿ ಸಂಸ್ಥೆಯ ಭದ್ರತಾ ಠೇವಣಿ ಮತ್ತು ಕರಾರು ಒಪ್ಪಂದ ಪತ್ರವನ್ನು ಸಲ್ಲಿಸಲು ಕನಿಷ್ಠ 21 ದಿನಗಳ ಕಾಲವಕಾಶವಿರುತ್ತದೆ.<br>• L1 ಬಿಡ್ ದಾರರು ಸಲ್ಲಿಸಿರುವ ಭದ್ರತಾ ಠೇವಣಿ ಮತ್ತು ಕರಾರು ಒಪ್ಪಂದ ಪತ್ರವನ್ನು ಸಲ್ಲಿಸಿದ ತಕ್ಷಣವೇ ಕ್ರಮವಹಿಸಿ ಸಂಭಂದಿತ ಸಂಸ್ಥೆಗಳಿಗೆ ಖರೀದಿ ಆದೇಶಗಳನ್ನು ನೀಡಲಾಗುತ್ತದೆ.<br>• ಖರೀದಿ ಆದೇಶಗಳನ್ನು ಪಡೆದ ಸಂಬಂಧಿತ ಸಂಸ್ಥೆಗಳಿಗೆ ಅಂದಾಜು 45 ರಿಂದ 70 ದಿನಗಳವರೆಗೆ (45days for Tablets, surgical, Medical devices, etc & 70 days for Injectables including IV fluids) ಔಷಧಗಳನ್ನು ಜಿಲ್ಲಾ ಔಷಧ ಉಗ್ರಾಣಗಳಿಗೆ ಪೂರೈಸಲು ಕಾಲವಕಾಶ ಇರುತ್ತದೆ.<br>• ಜಿಲ್ಲಾ ಔಷಧ ಉಗ್ರಾಣಗಳಿಗೆ ಸರಬರಾಜುಗೊಂಡ ಔಷಧಗಳನ್ನು ನಿಯಮಗಳಂತೆ Quarntine ಗೆ |

| | | |
|---|---|---|
| | | ಒಳಪಡಿಸಲಾಗಿ ಗುಣವಿಶ್ಲೇಷಣೆ ಪಡೆದ ನಂತರ ಸಂಬಂಧಿತ ಆರೋಗ್ಯ ಸಂಸ್ಥೆಗಳಿಗ ಗುಣಮಟ್ಟದ ಔಷಧಗಳನ್ನು (Standard Quality) ವಿತರಿಸಲಾಗುತ್ತದೆ. ಸದರಿ ಪ್ರಕ್ರಿಯೆಯು ಪೂರ್ಣಗೊಳಿಸಲು ಅಂದಾಜು 30 ದಿನಗಳ ಕಾಲವಕಾಶ ಬೇಕಾಗುತ್ತದ.<br><br>ಆದುದರಿಂದ, ಖರೀದಿ ಪ್ರಕ್ರಿಯ ಪ್ರಾರಂಭಿಸಿ ಮತ್ತು ಪೂರ್ಣಗೊಳಿಸಿ ನಂತರ ಕಾರ್ಯದೇಶಗಳನ್ನು ನೀಡಿ ಸರಬರಾಜುದಾರರಿಂದ ಪಡೆದು ಔಷಧಗಳನ್ನು ಉಗ್ರಾಣಗಳಿಂದ ಆರೋಗ್ಯ ಸಂಸ್ಥೆಗಳಿಗೆ ಸರಬರಾಜು ಪೂರ್ಣಗೊಳಿಸಲು ಸಾಕಷ್ಟು ಸಮಯದ ಅವಕಾಶ ಬೇಕಾಗಿರುತ್ತದೆ.<br><br>2025-26 ನೇ ಸಾಲಿನ ಅನುಮೋದಿತ ಔಷಧಿಗಳ ಖರೀದಿ ಪ್ರಕ್ರಿಯೆಯಲ್ಲಿ ಯಾವುದೇ ಲೋಪ ಮತ್ತು ನಿರ್ಲಕ್ಷ್ಯ ಹಾಗೂ ಭ್ರಷ್ಟಾಚಾರಕ್ಕೆ ಅಸ್ಪದ ನೀಡದೇ ಪಾರದರ್ಶಕವಾಗಿ ಕೆಟಿಪಿಪಿ ಕಾಯ್ದೆ 1999 ಹಾಗೂ ಕೆಟಿಪಿಪಿ ನಿಯಮಗಳು, 2000 ಗಳನ್ನು ಅನುಸರಿಸಿ ಖರೀದಿ ಪ್ರಕ್ರಿಯೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. |
| (ಉ) | ರಾಜ್ಯ ಔಷಧ ಉಗ್ರಾಣಗಳಲ್ಲಿ ಕನಿಷ್ಠ ಅಗತ್ಯ ಪ್ರಮಾಣದ ಔಷಧ ಸಂಗ್ರಹವನ್ನು ನಿರಂತರವಾಗಿ ಉಳಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; ಶಸ್ತ್ರಚಿಕಿತ್ಸೆಗಳಿಗೆ ಅಗತ್ಯವಾದ ಹೊಲಿಗೆ ಸಾಮಗ್ರಿ, ಬ್ಯಾಂಡೇಜ್ ಹಾಗೂ ಇತರ ವೈದ್ಯಕೀಯ ಉಪಕರಣಗಳ ಸಮರ್ಪಕ ಪೂರೈಕೆಗೆ ವಿಶೇಷ ತುರ್ತು ಕ್ರಮಗಳನ್ನು ಕೈಗೊಳ್ಳುವ ಯೋಜನೆ ಸರ್ಕಾರಕ್ಕಿದೆಯೇ: ಮುಂದಿನ ದಿನಗಳಲ್ಲಿ ಇಂತಹ ಔಷಧ ಕೊರತೆ ಉಂಟಾಗದಂತೆ ದೀರ್ಘಕಾಲಿಕ ಕಾರ್ಯಯೋಜನೆ ರೂಪಿಸಿದೆಯೇ? (ವಿವರ ನೀಡುವುದು) | ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಲಭ್ಯತೆಗಾಗಿ:<br><br>ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಆರೋಗ್ಯ ಸಂಸ್ಥೆಗಳಲ್ಲಿ ಔಷಧ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಮಧ್ಯಂತರ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರ ಭಾಗವಾಗಿ KSMSCL ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ರೂ. 30 ಕೋಟಿ ಮೊತ್ತವನ್ನು SAST ಗೆ ಬಿಡುಗಡೆ ಮಾಡಲಾಗಿದ್ದು, ಅದನ್ನು ಆರೋಗ್ಯ ಸಂಸ್ಥೆಗಳಿಗೆ ಮರು ಬಿಡುಗಡೆ ಮಾಡುವ ಮೂಲಕ ತುರ್ತು ಅವಶ್ಯಕತೆಗಳಿಗೆ ಅಗತ್ಯ ಔಷಧಿಗಳನ್ನು ಸ್ಥಳೀಯವಾಗಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಇದಲ್ಲದೆ, ಆರೋಗ್ಯ ಸಂಸ್ಥೆಗಳು ಅಗತ್ಯವಿರುವ ಔಷಧಿಗಳನ್ನು Government e-Marketplace (GeM) ಪೋರ್ಟಲ್ ಮೂಲಕವೂ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ, ಇದರಿಂದ ತುರ್ತು ಅವಶ್ಯಕತೆಗಳಿಗೆ ಔಷಧಿಗಳನ್ನು ತ್ವರಿತವಾಗಿ ಪಡೆಯಲು ಸಹಾಯವಾಗುತ್ತದೆ.<br><br>ಟೆಂಡರ್ ಪ್ರಕ್ರಿಯೆಯನ್ನು ವೇಗಗೊಳಿಸಲು ನಾಲ್ಕು ಟೆಂಡರ್ ಮೌಲ್ಯಮಾಪನ ತಂಡಗಳನ್ನು ರಚಿಸಲಾಗಿದ್ದು, ಮೌಲ್ಯಮಾಪನ ಪ್ರಕ್ರಿಯೆ ತ್ವರಿತಗೊಳಿಸಲಾಗುತ್ತಿದೆ.<br><br>ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ ಮಟ್ಟದ ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಸುಮಾರು 18 ಅತ್ಯವಶ್ಯಕ |

ಔಷಧಿಗಳನ್ನು ಗುರುತಿಸಲಾಗಿದ್ದು, ಅವುಗಳ ಉಗ್ರಾಣ ಮಟ್ಟದ ಸಂಗ್ರಹ ಕಡಿಮೆಯಾಗಿದೆ ಹಾಗೂ ಅವುಗಳಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಮೌಲ್ಯಮಾಪನ ಹಂತದಲ್ಲಿದೆ. ಈ ಔಷಧಿಗಳು ಕರ್ನಾಟಕ ಆಂಟಿಬಯೋಟಿಕ್ಸ್ ಅಂಡ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ (Karnataka Antibiotics and Pharmaceuticals Limited - KAPL) ಸಂಸ್ಥೆಯಲ್ಲಿ ತಕ್ಷಣ ಲಭ್ಯವಿರುವುದರಿಂದ, ಅವುಗಳಲ್ಲಿ ಅಗತ್ಯವಿರುವ ಎರಡು ತಿಂಗಳ ಪ್ರಮಾಣವನ್ನು ಖರೀದಿಸಲು 4G ವಿನಾಯಿತಿ ಪಡೆಯುವ ಮೂಲಕ ಖರೀದಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ, ಇದರಿಂದ ಅವುಗಳನ್ನು ಆರೋಗ್ಯ ಸಂಸ್ಥೆಗಳಿಗೆ ತಕ್ಷಣ ಪೂರೈಕೆ ಮಾಡಲು ಕ್ರಮವಹಿಸಲಾಗಿರುತ್ತದೆ.

ಖರೀದಿ ಪ್ರಕ್ರಿಯೆಯನ್ನು ಸುಧಾರಿಸಲು ಹಾಗೂ ಟೆಂಡರ್‌ನಲ್ಲಿ ಹೆಚ್ಚಿನ ಭಾಗವಹಿಸುವಿಕೆಯನ್ನು ಉತ್ತೇಜಿಸಲು KSMSCL ವತಿಯಿಂದ ಟೆಂಡರ್ ಪ್ರಕ್ರಿಯೆಯಲ್ಲಿ ಪ್ರಮುಖ ಸುಧಾರಣೆಗಳನ್ನು ಕೈಗೊಂಡಿದೆ.

1. ಔಷಧಿಗಳ ಪಟ್ಟಿಯ ಸಮಗ್ರ ಪರಿಶೀಲನೆ ಮತ್ತು ಪರಿಷ್ಕರಣೆ
2. KSMSCL ಅಧಿಕಾರಿಗಳು ತಮಿಳುನಾಡಿನ ಔಷಧ ಖರೀದಿ ಮಾದರಿಯನ್ನು ಅಧ್ಯಯನ ಮಾಡಿ ಅದರ ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಂಡು ಪ್ರಸ್ತುತ ಟೆಂಡರ್ ದಾಖಲೆಯಲ್ಲಿ ಮಹತ್ವದ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ.
3. ತಮಿಳುನಾಡು ರಾಜ್ಯದಲ್ಲಿ ಅನುಸರಿಸಲಾಗುತ್ತಿರುವ Rate Contract (RC) ಮಾದರಿಯ ಔಷಧ ಖರೀದಿ ವ್ಯವಸ್ಥೆಯನ್ನು ಜಾರಿಗೆ ತರಲು ಸಾಧ್ಯತೆಗಳನ್ನು ಪರಿಶೀಲಿಸಲಾಗಿದೆ. ಆದರೆ ಖರೀದಿ ನಿಯಮಗಳು, ಹಣಕಾಸು ನಿಯಂತ್ರಣ ಹಾಗೂ ಆಡಿಟ್ ಸಂಬಂಧಿತ ಅಂಶಗಳನ್ನು ಪರಿಗಣಿಸಿ ಹಣಕಾಸು ಇಲಾಖೆಯು ಪ್ರಸ್ತುತ ಇರುವ ಟೆಂಡರ್ ಆಧಾರಿತ ಖರೀದಿ ವ್ಯವಸ್ಥೆಯನ್ನು ಮುಂದುವರಿಸುವಂತೆ ಸಲಹೆ ನೀಡಿರುವುದರಿಂದ ಇದೇ ವ್ಯವಸ್ಥೆಯನ್ನು ಮುಂದುವರಿಸುತ್ತಾ ಅದರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
4. ತಯಾರಿಕಾ ಘಟಕಗಳ ಪರಿಶೀಲನೆ (Factory Inspection):
5. ಟೆಂಡರ್ ಷರತ್ತುಗಳ ಪರಿಷ್ಕರಣೆ (Past Performance Relaxation):

| | | |
|---|---|---|
| | | 6. Drug Quarantine Policy ಜಾರಿ:<br><br>2026-27ನೇ ಸಾಲಿಗೆ ಕೈಗೊಳ್ಳಲಾದ ಸುಧಾರಣೆಗಳು / ಕ್ರಮಗಳು:<br>• e-Aushada Software ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿ,, PHC / CHC / GH / DH ಮಟ್ಟದ ಆರೋಗ್ಯ ಸಂಸ್ಥೆಗಳಿಗೆ ಔಷಧಿಗಳ ಬೇಡಿಕೆ (indent) ಹಾಗೂ ಪೂರೈಕೆಯನ್ನು ನೈಜ ಸಮಯದಲ್ಲಿ (real-time tracking and monitoring ) ಟ್ರ್ಯಾಕ್ ಮತ್ತು ಮಾನಿಟರ್ ಮಾಡುವ ವ್ಯವಸ್ಥೆಯನ್ನು ಬಲಪಡಿಸಲಾಗಿದೆ.<br>• ರಾಜ್ಯ ಔಷಧ ಚಿಕಿತ್ಸ ಸಮಿತಿ (State Therapeutic Committee - STC) ಯು 2026-27ನೇ ಸಾಲಿಗೆ ಒಟ್ಟು 969 ಔಷಧಿಗಳನ್ನು ಖರೀದಿಗೆ ಅಂತಿಮಗೊಳಿಸಿದೆ. ಈ ಸಂಬಂಧ ಸರ್ಕಾರದ ಅನುಮೋದನೆ ಪಡೆಯುವ ಪ್ರಕ್ರಿಯೆಯನ್ನು ಶೀಘ್ರಗೊಳಿಸಿ, ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಔಷಧ ಖರೀದಿ ಪ್ರಕ್ರಿಯೆಯನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಆಕುಕ 20 ಎಸ್.ಟಿ.ಕ್ಯೂ. 2026

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ-1

**Surgical Suture details**

| Sl.No | PO Date | Drug Id | Drug Name | Order Qty | Stock details: Present WH Stock as on 09-03-2026 | Stock details: Present Health institution Stock as on 09-03-2026 |
|---|---|---|---|---|---|---|
| 1 | 22-01-2024 | 28.24.110 | Absorbable Surgical Suture antibacterial coated Polyglactin 1/2 Circle RB 30MM Needle,Length 90 CM NA 2-0 12 Foils | 10,804 | 2,037 | 5,246 |
| 2 | 22 01-2024 | 28.24.22 | Absorbable Surgical Suture Antibacterial coated Polyglactin 1/2 Circle RB,CC/Taper Point 30MM Needle, length 90 cm NA 1/0 12 Foils | 8,207 | 1,879 | 5,231 |
| 3 | 22-01-2024 | 28.24.112 | Absorbable Surgical suture Antibacterial Coated Polyglactin 1/2 Circle round body 36MM Needle, length 90 cm NA 1/0 12 Foils | 9,245 | 31 | 4,383 |
| 4 | 22-01-2024 | 28.24.113 | ABSORBABLE SURGICAL SUTURE ANTIBACTERIAL COATED POLYGLACTIN 1/2 CIRCLE round body 40MM NEEDLE, LENGTH 90CM NA SIZE 1 12 Foils | 29,229 | 2,024 | 8,790 |
| 5 | 17-02-2024 | 28.24.105 | Absorbable Surgical Suture Polyglactin 910 Size 5-0 (1/2 Circle round body 16mm needle length 45cm - 2303) NA SIZE 5-0 1x12foils | 595 | 68 | 267 |
| 6 | 17-02-2024 | 28.3.22 | ABSORBABLE SURGICAL SUTURES CHROMIC CATGUT SIZE 1-0(1/2 CIRCLE ROUND BODY NEEDLE 45MM,LENGTH 100CM)(4229) NA SIZE 1 0 1x12 | 33,152 | 2,701 | 11,084 |
| 7 | 17-02-2024 | 28.27.121 | NATURAL NON-ABSORBALE BLACK BRAIDED SILK SUTURES SIZE 1 WITH 60MM 3/8 CIRCLE CUTTING NEEDLE SUTURE LENGTH 76CM(5062) NA SIZE 1 1x12 | 11,162 | 4,328 | 5,570 |
| 8 | 17-02-2024 | 28.27.124 | NON - ABSORBABLE SURGICAL SUTURE POLYAMIDE SIZE 3-0 (3/8 CIRCLE CUTTING 16MM NEEDLE LENGTH 70CM) 12FOILS (3321) NA 3/0 1x12foils | 3,235 | 629 | 2,424 |
| 9 | 18-01-2024 | 28.27.126 | NON - ABSORBABLE SURGICAL SUTURE POLYPROPYLENE SIZE 1 (1/2 CIRCLE ROUNDBODY 40MM NEEDLE LENGTH 76CM 12FOILS (843) NA SIZE 1 1x12foils | 7,317 | 827 | 3,863 |
| 10 | 18-01-2024 | 28.27.128 | NON - ABSORBABLE SURGICAL SUTURE POLYPROPYLENE SIZE 2-0 (1/2 CIRCLE ROUNDBODY 30MM NEEDLE LENGTH 70CM) 12FOILS (841) NA 2/0 1x12foils | 4,911 | 384 | 2,761 |
| 11 | 17-02-2024 | 28.27.133 | Non-Absorbable Polyamide Surgical Suture 1/2 Circle reverse cutting 45mm needle length 100cm (3338) NA SIZE 1 1x12foils | 2,854 | 256 | 1,310 |
| 12 | 17-02 2024 | 28 27 84 | POLYDIAXANONE SIZE 1 (1/2 CIRCLE RC 40MM orthopaedic Surgery (OS)NEEDLE Suture LENGTH of 90CM(9221)) NA 1 12 Foils | 2,765 | 1,177 | 973 |